ಎಲ್ಲ ಸಂದರ್ಭಗಳಲ್ಲೂ ಅನ್ವಯವಾಗಬೇಕಾಗಿರುವ ಈ ಸೂತ್ರ ಸತ್ಯವನ್ನು ಆಧರಿಸದೆ ಬೇರೆ ಹೇಗೆ ತಾನೆ ಇರಬಲ್ಲದು? ಮೂಲತಃ ಮೌಲ್ಯಗಳು ಮನುಷ್ಯನ ಮನಸ್ಸು ಗ್ರಹಿಸಬಹುದಾದ ಸತ್ಯದ ಆಧಾರದ ಮೇಲೆ ಮಾತ್ರ ಇರಬಲ್ಲವು. ಈ ಕಾರಣ ದಿಂದಲೇ ಶ್ರೀರಾಮಕೃಷ್ಣರು ಪಾಪ–ಪುಣ್ಯ, ಸ್ವರ್ಗ–ನರಕ, ಕತ್ತಲು–ಬೆಳಕು, ಜ್ಞಾನ–ಅಜ್ಞಾನ ಮುಂತಾದ ದ್ವಂದ್ವಗಳನ್ನು ತಾಯಿಯ ಪಾದಗಳಲ್ಲಿ ಅರ್ಪಿಸಿ, ದ್ವಂದ್ವಾತೀತ ಸ್ಥಿತಿಯನ್ನು ಆರಿಸಿಕೊಂಡರು. ಆದರೆ ಸತ್ಯ–ಅಸತ್ಯಗಳನ್ನು ಇದೇ ಬಗೆಯ ದ್ವಂದ್ವ ಎಂದು ಪರಿಗಣಿಸಿ ಅವರಿಗೆ ತ್ಯಜಿಸಲಾಗಲಿಲ್ಲ. ಸತ್ಯ ಮತ್ತು ಅಸತ್ಯವನ್ನು ದ್ವಂದ್ವ ಎಂದು ಪರಿಗಣಿಸಲು ಸಾಧ್ಯವಿಲ್ಲ. ವೇದಾಂತದ ದೃಷ್ಟಿಯಿಂದ ಅಸತ್ಯ ಎಂಬುದು ಅಭಾವವೇ ಹೊರತು ಅದು ಯಾವುದೇ ನಿರ್ದಿಷ್ಟ ಅಸ್ತಿತ್ವವನ್ನು ಸೂಚಿಸು ವುದಿಲ್ಲ. ಹಾಗಾಗಿ ಏನು ಇದೆಯೊ ಅದನ್ನು ಕಾಣುವ ಧೈರ್ಯ ನಮಗಿರಬೇಕು. ಹಾವು–ಹಗ್ಗ ದ್ವಂದ್ವಗಳು ಎಂದು ಭಾವಿಸಿ ಎರಡನ್ನೂ ಮೀರಿ ಹೊಸದೊಂದನ್ನು ನೋಡಲು ಸಾಧ್ಯವಿಲ್ಲ. ಹಗ್ಗವನ್ನು ನೋಡಿದರೆ ಸಾಕು, ಹಾವು ಇಲ್ಲ ದಾಗುತ್ತದೆ.

ಸ್ವಾಮೀಜಿಯವರು ದಿನನಿತ್ಯದ ಜೀವನದಲ್ಲಿ ನೈತಿಕತೆಯ ಬಗ್ಗೆ ಮಾತನಾಡುತ್ತ, 'ನೈತಿಕತೆ' ಎಂಬುದು ಜನಾಂಗದಿಂದ ಜನಾಂಗಕ್ಕೆ, ದೇಶದಿಂದ ದೇಶಕ್ಕೆ ಒಂದೇ ರೀತಿಯಲ್ಲಿ ಇರ ಲಾಗುವುದಿಲ್ಲ ಎಂಬ ವಾಸ್ತವ ಅಂಶವನ್ನು ಎತ್ತಿ ಹಿಡಿಯುತ್ತಾರೆ. ಆಹಾರ ವಿಹಾರಗಳಿಗೆ ಸಂಬಂಧಪಟ್ಟ ನೈತಿಕತೆಗೆ ಈ ಮಾತು ಅನ್ವಯವಾಗಬಹುದು. ಇದು ಆಯಾ ಭೌಗೋಳಿಕ ಪ್ರದೇಶದ ಹವಾಗುಣಕ್ಕೂ ಸಂಬಂಧಪಡಬಹುದು. ಆದರೆ ನೈತಿಕ ಜೀವನದ ಬುನಾದಿ 'ನಿಃಸ್ವಾರ್ಥ' ಮತ್ತು 'ತ್ಯಾಗ' ಎಂದು ಸ್ವಾಮೀಜಿ ವಿವರಿಸುತ್ತಾರೆ. ತ್ಯಾಗದಿಂದ ಉಂಟಾಗುವ ನಿಸ್ವಾರ್ಥದಿಂದ ಮಾತ್ರ ಮನುಷ್ಯನಿಗೆ ನೈತಿಕ ಜೀವನ ಸಾಧ್ಯ. ಈ ನೈತಿಕ ಜೀವನದ ಉದ್ದೇಶ ಸತ್ಯ ಶಿವ ಸುಂದರದ ಅನುಭವವನ್ನು ಸಾಧ್ಯಮಾಡುವುದು. ಇದು ನಿಃಸ್ವಾರ್ಥದಿಂದ ಮಾತ್ರ ಸಾಧ್ಯ.

ಸ್ವಾಮೀಜಿಯವರು ಏಕತೆಯ ತತ್ತ್ವ ಮತ್ತು ನಿಃಸ್ವಾರ್ಥ ಗಳು ಎಲ್ಲ ಮೌಲ್ಯಗಳ ಬುನಾದಿ ಎಂದು ಸಾಧಿಸಿ ತೋರಿಸು ತ್ತಾರೆ. ಅವರು ಹೇಳುತ್ತಾರೆ, "ಏಕತೆಯೇ ಎಲ್ಲ ಮೌಲ್ಯಗಳ ಆಧಾರಸ್ತಂಭ. ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಆಫ್ರಿಕಾ ಮುಂತಾದ ದೇಶಗಳಲ್ಲಿ ಕಾಣಬರುವ ಇತ್ತೀಚಿನ ರಾಜಕೀಯ ಮತ್ತು ಸಾಮಾಜಿಕ ಆಶಯಗಳ ಹಿಂದೆ ಈ ಏಕತೆಯ ತತ್ತ್ವವೇ ಕಂಡುಬರುತ್ತದೆ" ಇಂದಿಗೂ ಕೂಡ ಅಂತರರಾಷ್ಟ್ರೀಯ ಸಂಬಂಧಗಳು ತಿಳಿದೋ ತಿಳಿಯದೆಯೋ ಈ ಏಕತೆಯ ತತ್ತ್ವದ ಮೇಲೆಯೇ ಕೆಲಸಮಾಡುತ್ತವೆ. ಮನುಷ್ಯನಲ್ಲಿ ಅಂತ ರ್ಗತವಾಗಿರುವ ಈ ಏಕತೆಯ ತತ್ತ್ವ ಅನಿವಾರ್ಯವಾಗಿ ದೇಶ–ದೇಶಗಳ ನಡುವೆ ಪರಸ್ಪರ ಸಹಕಾರವನ್ನೂ, ಸೌಹಾರ್ದ ವನ್ನೂ ಏರ್ಪಡಿಸುತ್ತದೆ. "That which is selfish is immoral and that which is unselfish is moral" (ಯಾವುದು ಸ್ವಾರ್ಥವೋ ಅದೇ ಅನೈತಿಕತೆ; ಯಾವುದು ನಿಸ್ವಾರ್ಥವೋ ಅದೇ ನೈತಿಕತೆ) ಎಂಬ ಮಾತನ್ನು ಸ್ವಾಮೀಜಿ ಏಕೆ ಹೇಳುತ್ತಾರೆ ಎಂಬುದು ಈ ಹಿನ್ನೆಲೆಯಲ್ಲಿ ಅರ್ಥವಾಗುತ್ತದೆ.

'ಮನವರಿಯದ ಕಳ್ಳತನವಿಲ್ಲ' ಎಂಬ ಮಾತಿನಂತೆ ನಮ್ಮೊಳಗೆ, ನಮ್ಮನ್ನೇ ನಾವು ಮೋಸ ಮಾಡಿಕೊಳ್ಳುತ್ತಾ ಬಹಳ ಕಾಲ ಆರೋಗ್ಯವಂತರಾಗಿ ಇರಲಾಗುವುದಿಲ್ಲ. ಯಾವುದು ಸತ್ಯ, ಯಾವುದು ಅಸತ್ಯ ಎಂಬ ತಿಳಿವಳಿಕೆ ಸಾಧ್ಯವಾಗುವುದೇ ಮನುಷ್ಯನ ವಿಶಿಷ್ಟತೆ. **'ಅರ್ಥ ನಿನಗಾದೊಡದು ಮಿತದರ್ಥ, ಸ್ವಾರ್ಥ ಮಿತವಾದಂತೆ ವಿಸ್ತರಿಪುದರ್ಥ'** ಎಂಬ ಮಂಕುತಿಮ್ಮನ ಕಗ್ಗದ ಮಾತಿನಂತೆ ಮನುಷ್ಯನಲ್ಲಿ ನಿಃಸ್ವಾರ್ಥತೆ ಹೆಚ್ಚಾದಂತೆಲ್ಲ ಸತ್ಯ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಾ ಹೊಗುತ್ತದೆ. ಆಗ ನೀತಿ, ಮೌಲ್ಯಗಳು ದ್ವಂದ್ವಾತೀತವಾಗಿ ಬುದ್ಧಿಗೆ ತಿಳಿಯ ದಿದ್ದರೂ ಹೃದಯಕ್ಕೆ ವೇದ್ಯವಾಗುತ್ತವೆ. ✪

## ಜಯತು ಗುರು ವಿವೇಕಾನಂದ

**ಜಯತು ಗುರು ವಿವೇಕಾನಂದ**
**ಜಯತು ಸ್ವಾಮೀಜೀ ॥**

**ರಾಮಕೃಷ್ಣ ಹೃದಯಕಿರಣ**
**ನಿನ್ನ ಪದಕೆ ಕೋಟಿ ನಮನ**
**॥ ಜಯತು ಸ್ವಾಮೀಜೀ ॥**

**ಬಂಧ ಮುಕ್ತಿ ಪಡೆದ ಬಾಳು ಉಲ್ಲಾಸದಿ ನಲಿದಿದೆ**
**ದೀನ ದಲಿತರೆದೆಯ ನೆಲದಿ**
**ಹೊಸ ಭರವಸೆ ಚಿಮ್ಮಿದೆ ॥**

**ಮೂಕ ಮೂಢ ಜನರ ಮುಖದಿ**
**ನುಡಿಯ ಬೆಳಕು ಅರಳಿದೆ**
**ಮೃತ ಸಮಷ್ಟಿ ಲೋಕ ಹೃದಯ**
**ಜೀವದುಂಬಿ ಮಿಡಿದಿದೆ ॥ ಜಯತು ॥**

**ತಮಸಮುದ್ರ ಮಥಿಸಿ ತಂದ**
**ಮಹಾಮಂತ್ರ ನೀಡಿದೆ**
**'ಅಭೀ' ಎಂಬ ಅಭಯ ನುಡಿಯ**
**ಆತ್ಮನಿಧಿಯ ಮಾಡಿದೆ**
**ಮಹಾಮಾಯೆಯೆಸೆದ ಜಾಲ ಆಯಿತೀಗ ನಿಷ್ಫಲ**
**ಎಲ್ಲ ಬಗೆಯ ದ್ವಂದ್ವಭಾವವಳಿದು**
**ಬಂತು ಶಿವಫಲ ॥ ಜಯತು ॥**

**– ಪ್ರೊ. ಕೆ.ಬಿ. ಪ್ರಭುಪ್ರಸಾದ್**

# ವಿದ್ಯಾರ್ಥಿಗಳಿಗಾಗಿ ಪಂಚಶೀಲ

ಸ್ವಾಮಿ ಜಗದಾತ್ಮಾನಂದ

## ೫. ಸೇವೆ

**ಸೇವೆ** ಎಂದರೆ ಕೆಲವೊಂದು ಸೀಮಿತ ಕಾರ್ಯಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಅದು ಜೀವನದ ಅವಿಭಾಜ್ಯ ಅಂಗವಾಗಬೇಕು. ಸಾಮಾಜಿಕ ಜೀವನವನ್ನು ನೋಡುವ ಒಂದು ಮೂಲಭೂತ ದೃಷ್ಟಿಕೋನವೇ ಅದಾಗಬೇಕು. ಸೇವೆಯ ಜೀವನವಿಧಾನದಲ್ಲಿ ನಾಲ್ಕು ಅಂಶಗಳಿರುತ್ತವೆ: **(ಅ) ತಂದೆತಾಯಿಯರ ಸೇವೆ (ಆ) ಸಜ್ಜನ ಸಂತ ಮಹಾತ್ಮರ, ಗುರುಗಳ ಸೇವೆ, (ಇ) ಬಡಜನರ ಹಾಗೂ ರೋಗಿಗಳ ಸೇವೆ (ಈ) ತಾನು ಮಾಡುವ ಕಾರ್ಯಗಳ ಮೂಲಕವೇ ಒಟ್ಟಾರೆ ಮಾನವಕುಲದ ಸೇವೆ.** ಸೇವೆಯು ಭಗವಂತನ ಪ್ರೀತಿಗೆ ಒಳಗಾಗುವ, ಹಾಗೆಯೇ ನಮ್ಮೊಳಗಿನ ದೈವತ್ವದ ಅಭಿವ್ಯಕ್ತಿಯನ್ನು ಮಾಡಿಕೊಳ್ಳುವ ಒಂದು ಪರಿಣಾಮಕಾರಿ ವಿಧಾನ. ಪ್ರಕೃತಿಯೇ ಸೇವೆಯ ಸ್ವರೂಪವನ್ನು ತೋರಿಸಿಕೊಡುತ್ತದೆ. ಅದರ ಶಕ್ತಿಯ ವಿವಿಧ ಮುಖಗಳಾದ ನೀರು, ಗಾಳಿ, ಬೆಳಕು ನಿಃಸ್ವಾರ್ಥವಾಗಿ ಎಲ್ಲರ ಸೇವೆ ಮಾಡುವುದನ್ನು ಕಾಣುತ್ತೇವೆ.

ಪ್ರಕೃತಿಸಹಜವಾಗಿ ಸೇವೆಯು ಮೂರ್ತಿಮತ್ತಾಗಿ ತೋರುವುದು ತಾಯಿಯಲ್ಲಿ. ಹೆರಿಗೆಯ ಕಡುಕಷ್ಟವನ್ನು ಅನುಭವಿಸುವ ತಾಯಿಗೆ ಮಗುವಿನ ಮುಖ ನೋಡಿದೊಡನೆ ಅವೆಲ್ಲವೂ ಮರೆಯಾಗಿ ಶಾಂತಿ ಮೂಡುತ್ತದೆ. ಆಕೆಯದು ನಿಷ್ಕಲ್ಮಶ ಪ್ರೀತಿ, ದಿನದಲ್ಲಿ ೨೪ ಗಂಟೆಯೂ ಆಕೆಗೆ ಮಗುವಿನ ಮೇಲೆಯೇ ಗಮನ. ಮಗು ನಿದ್ದೆ ಮಾಡುತ್ತಿರಲಿ, ಎಚ್ಚರವಿರಲಿ ಮಗುವಿನ ಪ್ರತಿಯೊಂದು ಚಲನೆಯನ್ನೂ ಆಕೆ ಪ್ರೀತಿಯಿಂದ ಗಮನಿಸುತ್ತಾಳೆ. ಪ್ರಜ್ಞಾಪೂರ್ವಕ ಕಾಳಜಿ ಅವಳದು. ಮಗುವಿನ ಏಳಿಗೆಗಾಗಿ, ಅದರ ಮೇಲೆ ಯಾವಾಗಲೂ ಕಣ್ಣಾವಲು ಇಟ್ಟಿರುತ್ತಾಳೆ. ಮಗು ತನ್ನ ಕಾಲ ಮೇಲೆ ನಿಂತು ಒಬ್ಬ ಪ್ರಜ್ಞಾವಂತ ವ್ಯಕ್ತಿಯಾಗುವವರೆಗೂ ಈ ಜವಾಬ್ದಾರಿ ಮುಂದುವರಿಯುತ್ತದೆ. ಇದೇ ರೀತಿ ಸಂತ ಮಹಾತ್ಮರು, ಗುರುಗಳು ನಮ್ಮ ವ್ಯಕ್ತಿತ್ವದ ಓರೆಕೋರೆಗಳನ್ನು ತಿದ್ದಿ ತೀಡಿ, ಮಾರ್ಗದರ್ಶನ ಮಾಡುತ್ತಾರೆ. ಆಧ್ಯಾತ್ಮಿಕ ಸಾಧನೆಯಲ್ಲಾಗಲಿ, ವಿದ್ಯೆಯ ಕಲಿಕೆಯಲ್ಲಾಗಲಿ ಇವರಿಗೆ ನಾವು ಮಾಡುವ ಸೇವೆ ಮಹತ್ವದ್ದು. ಅಹಂಕಾರ ತಗ್ಗಿ, ವಿನಯ ವಿಧೇಯತೆಗಳು ಮೂಡಿದಾಗ ಮಾತ್ರ ಅವರು ಕಲಿಸುವ ಪಾಠವನ್ನು ಅರಿತುಕೊಳ್ಳುವ ಮನಃಸ್ಥಿತಿ ನಮಗುಂಟಾಗುತ್ತದೆ. ಬಡಜನರಿಗೆ, ರೋಗಿಗಳಿಗೆ, ದುರ್ಬಲರಿಗೆ ಸೇವೆ ಸಲ್ಲಿಸುವುದು ಅವಶ್ಯ ಮಾಡಬೇಕಾದ ಕರ್ತವ್ಯ ಎಂದು ಎಲ್ಲ ಧರ್ಮಗಳೂ ಸಾರುತ್ತವೆ. ಆದರೆ ಅದು ಅಹಂಕಾರ ಪೋಷಣೆಗೆ ದಾರಿಯಾಗಬಾರದು. ಸೇವೆಯ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಉಚ್ಚಸ್ಥಾನದಲ್ಲಿ ನಿಂತು ಕೈಯಲ್ಲಿ ಮೂರು ಕಾಸನ್ನು ಹಿಡಿದುಕೊಂಡು, 'ಎಲಾ ಬಡವ, ಹಿಡಿ' ಎಂದು ಹೇಳದಿರಿ. ನೀವು ಆತನಿಗೆ ಸಹಾಯ ಮಾಡುವುದರಿಂದ ನಿಮಗೆ ನೀವೇ ಸಹಾಯ ಮಾಡಿಕೊಳ್ಳಲು ಶಕ್ತರಾದುದಕ್ಕೆ ಆ ಬಡವನಿಗೆ ಕೃತಜ್ಞರಾಗಿರಿ. ಧನ್ಯನಾಗುವವನು ದಾನಸ್ವೀಕಾರ ಮಾಡುವವನಲ್ಲ, ದಾನ ಕೊಡುವಾತ. ಈ ಪ್ರಪಂಚದಲ್ಲಿ ನಿಮ್ಮ ಕೃಪೆ ದಯೆಗಳನ್ನು ತೋರಿಸಲು, ತನ್ಮೂಲಕ ನೀವು ಶುದ್ಧರೂ, ಸಿದ್ಧರೂ ಆಗಲು ಅವಕಾಶ ದೊರೆತುದಕ್ಕಾಗಿ ನಿಮಗೆ ಉಪಕಾರ ಸ್ಮರಣೆಯಿರಲಿ. ಸತ್ಕಾರ್ಯಗಳಿಗೆಲ್ಲ ನಮ್ಮನ್ನು ಪವಿತ್ರರನ್ನಾಗಿಯೂ, ಪರಿಪೂರ್ಣರನ್ನಾಗಿಯೂ ಮಾಡುವ ಶಕ್ತಿ ಇದ್ದೇ ಇರುತ್ತದೆ."

ಹೀಗೆ ಮಾಡಲು ನಮಗೆ ಸಂತೃಪ್ತಿಯ ದೃಢತೆ ಹಾಗೂ ನನ್ನದೇನೂ ಇಲ್ಲ ಎನ್ನುವ ಸಮರ್ಪಣಾಭಾವ – ಈ ಎರಡೂ ಬೇಕು. ಒಳ್ಳೆಯ ಕಾರ್ಯಶೀಲನ ಬಗ್ಗೆ ಡಿ.ವಿ.ಜಿ. ಹೀಗೆ ಹೇಳುತ್ತಾರೆ:

**ಗರ್ವ ಪಡದುಪಕಾರಿ, ದರ್ಪ ಬಿಟ್ಟಧಿಕಾರಿ**
**ನಿರ್ವಿಕಾರದ ನಯನದಿಂ ನೋಳ್ಪುದಾರಿ**
**ಸರ್ವಧರ್ಮಾಧಾರಿ ನಿರ್ವಾಣ ಸಂಚಾರಿ**
**ಉರ್ವರೆಗೆ ಗುರುವವನು – ಮಂಕುತಿಮ್ಮ**

ಇನ್ನು ಮಾನವಸೇವೆ ಮಾಡುವವನು ಅದನ್ನು ತನ್ನ ಕರ್ತವ್ಯ ಎಂಬಂತೆ ನೋಡಬೇಕು. ಸಾಮಾಜಿಕ ಕಾರ್ಯ ಮಾಡುವವರು 'ಜೀವ–ಶಿವ' ಸಿದ್ಧಾಂತವನ್ನು ನೆನಪಿನಲ್ಲಿ ಇಟ್ಟಿರಬೇಕು. ಸ್ವಾಮಿ ವಿವೇಕಾನಂದರು ಹೇಳುವಂತೆ ನಮಗೆ ಅವಶ್ಯವಿರುವುದು ಮೂರು ಸಾಧನಗಳು: **ಅನುಭವಿಸುವ ಹೃದಯ, ಆಲೋಚಿಸುವ ಮಿದುಳು, ಕೆಲಸ ಮಾಡುವ ಕೈಗಳು.** ಅವರು ಹೇಳುತ್ತಾರೆ, "ನಿಮ್ಮನ್ನು ನೀವೇ ಒಂದು ಅದ್ಭುತ ಶಕ್ತಿಯ ಕೇಂದ್ರವಾಗಿರಿಸಿಕೊಳ್ಳಿ, ಮೊಟ್ಟಮೊದಲಾಗಿ ಪ್ರಪಂಚದ ಮೇಲೆ ಅನುಕಂಪವಿರಲಿ... ನಿಮ್ಮ ಮನಸ್ಸು ದ್ವೇಷ ಮತ್ತು ಅಸೂಯಾ ಭಾವನೆಗಳಿಂದ ಕೂಡಿದೆಯೇ ಎಂದು ನಿಮ್ಮನ್ನು ನೀವು ಪ್ರಶ್ನಿಸಿಕೊಳ್ಳಿ. ಕಾರಣ ಈ ಜಗತ್ತಿನ ಮೇಲೆ ಜನರು ಸುರಿಸುತ್ತಿರುವ ಟನ್ನುಗಟ್ಟಲೆ ದ್ವೇಷ–ಕೋಪಗಳಿಂದ ಒಳ್ಳೆಯ ಕೆಲಸಗಳೆಲ್ಲ ಹಾಳಾಗುತ್ತಿವೆ. ನೀವು ಪರಿಶುದ್ಧರಾಗಿದ್ದರೆ, ಧೀರರಾಗಿದ್ದರೆ, ನೀವೊಬ್ಬರೇ ಇಡೀ ಜಗತ್ತಿಗೆ ಸರಿಸಾಟಿ."

ಈ ಸೇವಾಕರ್ತರಿಗೆ ತಮ್ಮ ಕಾರ್ಯದ ಬಗ್ಗೆ, ಅದರ ಫಲದ ಬಗ್ಗೆ ಅತಿಯಾದ ಮೋಹವೂ ಒಳಿತಲ್ಲ; ಅದೇನಿದ್ದರೂ, ಡಿ.ವಿ.ಜಿ. ಹೇಳುವಂತೆ, ಎಲ್ಲರೊಳಗೆ ಒಂದಾಗುವ ಮಾರ್ಗ ಅಷ್ಟೆ :